# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 44
ಮಾನ್ಯ ಸದಸ್ಯರ ಹೆಸರು : ಶ್ರೀ ಅ.ದೇವೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 12/09/2022
ಉತ್ತರಿಸುವ ಸಚಿವರು : ಪ್ರವಾಸೋದ್ಯಮ, ಜೀವಿಶಾಸ್ತ್ರ, ಮತ್ತು ಪರಿಸರ ಸಚಿವರು

*****

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳ ವ್ಯಾಪ್ತಿಯಲ್ಲಿ ಸರ್ಕಾರ ಗುರುತಿಸಿರುವ ಪ್ರವಾಸೋದ್ಯಮ ತಾಣಗಳು ಯಾವುವು; | ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಗುರುತಿಸಿರುವ ಪ್ರವಾಸಿತಾಣಗಳ ವಿವರವನ್ನು **ಅನುಬಂಧ**ದಲ್ಲಿ ಒದಗಿಸಿದೆ. |
| ಆ) | ಈ ಪ್ರವಾಸೋದ್ಯಮ ತಾಣಗಳಲ್ಲಿ ಪ್ರವಾಸಿಗರಿಗೆ ಇಲಾಖಾ ವತಿಯಿಂದ ಒದಗಿಸಲಾಗಿರುವ ಸೌಲಭ್ಯಗಳೇನು; | ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳು ಒಳಗೊಂಡಂತೆ ರಾಜ್ಯದ ಎಲ್ಲಾ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಇಲಾಖೆಯಿಂದ ಗುರುತಿಸಿರುವ ಹಾಗೂ ಇತರೆ ಪ್ರವಾಸಿ ತಾಣಗಳಲ್ಲಿ ಕೊರತೆಯಿರುವ/ ಅಗತ್ಯವಿರುವ ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಇಲಾಖೆಗೆ ಜನಪ್ರತಿನಿಧಿಗಳಿಂದ, ಜಿಲ್ಲಾಧಿಕಾರಿಗಳು ಹಾಗೂ ಸ್ಥಳೀಯ ಸಂಘಸಂಸ್ಥೆಗಳಿಂದ ಸ್ವೀಕೃತವಾಗುವ ಪ್ರಸ್ತಾವನೆಗಳನ್ನು ಪರಿಶೀಲಿಸಿ ಹಾಗೂ ಇಲಾಖೆಗೆ ಒದಗಿಸುವ ಅನುದಾನದ ಲಭ್ಯತೆಯನ್ನು ಆಧಾರಿಸಿ ರಾಜ್ಯದ ವಿವಿಧ ಪ್ರವಾಸಿತಾಣಗಳಲ್ಲಿ ಈ ಕೆಳಕಂಡ ಪ್ರವಾಸಿ ಮೂಲಸೌಲಭ್ಯಗಳನ್ನು ಅಭಿವೃದ್ಧಿಪಡಿಸಲು ಕ್ರಮವಹಿಸಲಾಗುತ್ತದೆ.<br>• ಯಾತ್ರಿನಿವಾಸ<br>• ಡಾರ್ಮಿಟರಿ<br>• ಪ್ರವಾಸಿತಾಣಗಳನ್ನು ಸಂಪರ್ಕಿಸುವ ಕೂಡುರಸ್ತೆ<br>• ಶುದ್ಧ ಕುಡಿಯುವ ನೀರಿನ ಸೌಲಭ್ಯ<br>• ಶೌಚಾಲಯ ಮತ್ತು ಸ್ನಾನಗೃಹ<br>• ಪಾರ್ಕಿಂಗ್ ಸೌಲಭ್ಯ<br>• ಪ್ರವಾಸಿ ಸೂಚನಾ ಫಲಕಗಳು<br>• ಆಸನಗಳ ವ್ಯವಸ್ಥೆ<br>• ಮೆಟ್ಟಿಲುಗಳು ಮತ್ತು ರೈಲಿಂಗ್ಸ್<br>• ಪರಗೋಲ<br>• ಪಾತ್ ವೇ ನಿರ್ಮಾಣ<br>• ಪಾರಂಪರಿಕ ತಾಣಗಳಲ್ಲಿರುವ ಕೋಟೆ ಮತ್ತು ಸ್ಮಾರಕಗಳ ಸಂರಕ್ಷಣೆಯನ್ನು ರಾಜ್ಯ ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಮೂಲಕ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗುತ್ತದೆ.<br>• ಪ್ರವಾಸಿತಾಣಗಳಲ್ಲಿ ಅವಶ್ಯಕತೆಗನುಗುಣವಾಗಿ ಪ್ರವಾಸಿ ತಾಣದ ಸಮಗ್ರ ಅಭಿವೃದ್ಧಿಯ(Comprehensive Development) ಯೋಜನೆಗಳು.<br>• ಇತರೆ ಪ್ರವಾಸಿ ಸೌಲಭ್ಯಗಳು |
| ಇ) | ಈ ಪ್ರವಾಸೋದ್ಯಮ ತಾಣಗಳಲ್ಲಿ ಪ್ರವಾಸಿಗರಿಗೆ ಉಂಟಾಗಿರುವ ಕೊರತೆಗಳೇನು; ಅವುಗಳ ನಿವಾರಣೆಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ರಾಜ್ಯದ ವಿವಿಧ ಪ್ರವಾಸಿ ತಾಣಗಳಲ್ಲಿ ಉಂಟಾಗುವ ಯಾವುದೇ ಕೊರತೆಗಳು ಇಲಾಖೆಯ ಗಮನಕ್ಕೆ ಬಂದರೆ ಅಗತ್ಯತೆಗೆ ಅನುಗುಣವಾಗಿ ಸೂಕ್ತ ಕ್ರಮವಹಿಸಲಾಗುತ್ತದೆ. |

**ಸಂಖ್ಯೆ: ಟಿಓಆರ್ 249 ಟಿಡಿವಿ 2022**

**(ಆನಂದ್ ಸಿಂಗ್)**
ಪ್ರವಾಸೋದ್ಯಮ, ಜೀವಿಶಾಸ್ತ್ರ,
ಹಾಗೂ ಪರಿಸರ ಸಚಿವರು

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 44ಕ್ಕೆ ಅನುಬಂಧ**

ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ ಹಾಗೂ ರಾಮನಗರ ಜಿಲ್ಲೆಗಳಲ್ಲಿ ಪ್ರವಾಸೋದ್ಯಮ ಇಲಾಖೆಯು ಗುರುತಿಸಿರುವ ಪ್ರವಾಸಿ ತಾಣಗಳ ವಿವರ

| ಕ್ರ.ಸಂ. | ಜಿಲ್ಲೆ | ತಾಲ್ಲೂಕು | ಪ್ರವಾಸಿ ತಾಣಗಳು |
|---|---|---|---|
| 1 | ಬೆಂಗಳೂರು ನಗರ | ಬೆಂಗಳೂರು | ಕಬ್ಬನ್ ಪಾರ್ಕ್, ಲಾಲ್‌ಭಾಗ್, ಟಿಪ್ಪುಫೋರ್ಟ್, ಟಿಪ್ಪು ಅರಮನೆ, ವಿಶ್ವೇಶ್ವರಯ್ಯ ಕೈಗಾರಿಕಾ ಮತ್ತು ತಾಂತ್ರಿಕ ವಸ್ತು ಸಂಗ್ರಹಾಲಯ, ರೋರಿಚ್ ಎಸ್ಟೇಟ್-ತಾತಗುಣಿ, ವಿಧಾನಸೌಧ, ಸ್ಯಾಂಕಿ ಕೆರೆ, ಹಲಸೂರು ಕೆರೆ, ಸಂಗೀತ ವಸ್ತು ಸಂಗ್ರಹಾಲಯ ಜೆ.ಪಿ.ನಗರ, ರಾಚೇನಹಳ್ಳಿ ಕೆರೆ, ಹೆರಿಟೇಜ್ ಗ್ರಾಮ-ಶ್ರೀರಾಂಪುರ-ಜಕ್ಕೂರು, ನೆಲದಸಿರಿ ತಾವರೆಕೆರೆ, ನೆಹರು ತಾರಾಲಯ, ಬೆಂಗಳೂರು ಸರ್ಕಾರಿ ವಸ್ತು ಸಂಗ್ರಹಾಲಯ |
| | | ಬೆಂಗಳೂರು ಉತ್ತರ | ಹೆಸರಘಟ್ಟ |
| | | ಬೆಂಗಳೂರು ದಕ್ಷಿಣ | ರಾಮೋಹಳ್ಳಿ, ದೊಡ್ಡ ಆಲದಮರ |
| | | ಆನೇಕಲ್ | ಮುತ್ಯಾಲಮಡುವು, ಬನ್ನೇರುಘಟ್ಟ |
| 2 | ಬೆಂಗಳೂರು ಗ್ರಾಮಾಂತರ | ನೆಲಮಂಗಲ | ಶಿವಗಂಗೆ |
| | | ದೊಡ್ಡ ಬಳ್ಳಾಪುರ | ಹುಲ್ಲುಕಡ್ಡಿ ಬೆಟ್ಟ, ಮಾಕಳಿದುರ್ಗ ಬೆಟ್ಟ |
| | | ದೇವನಹಳ್ಳಿ | ದೇವನಹಳ್ಳಿ, ಟಿಪ್ಪು ಜನ್ಮಸ್ಥಳ ಮತ್ತು ಕೋಟೆ, ಕುಂದಾಣು ಬೆಟ್ಟ |
| | | ಹೊಸಕೋಟೆ | ಅಮ್ಮನಿಕೆರೆ (ಹೊಸಕೋಟೆ ಕೆರೆ) |
| 3 | ರಾಮನಗರ | ರಾಮನಗರ | ರಾಮನಗರ, ಕಣ್ವ, ರೇವಣಸಿದ್ದೇಶ್ವರ ಬೆಟ್ಟ, ಹಂದಿಗುಂದಿ ಬೆಟ್ಟ, ಕುಟಗಲ್ಲು ತಿಮ್ಮಪ್ಪನ ಬೆಟ್ಟ, ಜಲಸಿದ್ದೇಶ್ವರ ಬೆಟ್ಟ, ಬಾನಂದೂರು |
| | | ಮಾಗಡಿ | ಸಾವನದುರ್ಗ, ತಿಪ್ಪಗೊಂಡನಹಳ್ಳಿ, ಕೊಟಗಲ್ಲು, ಮಾಗಡಿ, ಬಿಲಿನಕಟ್ಟೆ ವನದೇವತೆ, ಯತಿರಾಜಸ್ವಾಮಿ ಬೆಟ್ಟ, ಶ್ರೀ ಲಕ್ಷ್ಮೀ ನಾರಾಯಣಸ್ವಾಮಿ ಬೆಟ್ಟ, ಕಲ್ಯಾ ಬೆಟ್ಟ, ಮಾಗಡಿ ಕೋಟೆ, ಎತ್ತಿನಗುಲಗಂಜಿ ಗುಡ್ಡ (ವೈ.ಜಿ.ಗುಡ್ಡ) ಜಲಾಶಯ |
| | | ಕನಕಪುರ | ಮೇಕೆದಾಟು (ಸಂಗಮ), ರಾಮನಗರ ಅಚಲುಬೆಟ್ಟ, ಮೈತ್ರೇಯ ಪಿರಮಿಡ್ ಕಣಿವೆ, ಚತುರ್ಭುಜ ರಾಮದೇವರ ಬೆಟ್ಟ |
| | | ಚನ್ನಪಟ್ಟಣ | ಚನ್ನಪಟ್ಟಣ, ದೊಡ್ಡಮಳ್ಳೂರು |